ನಾನು ಗೊತ್ತಿರುವಷ್ಟನ್ನು ಬರೆಯುತ್ತೇನೆ. ಹಾಗೆ ಬರೆಯಲು ಸ್ಫೂರ್ತಿಯ ಸಮಯಕ್ಕೆ ಕಾಯುವುದಿಲ್ಲ. ಕವಿಗಳ ವಿಚಾರದಲ್ಲಿ ಅದು ಇರಬಹುದೇನೊ? ಯಾವತ್ತೂ ನಾನು ಗದ್ಯಬರೆಹಗಾರನಾದುದರಿಂದ, ಕಂಡು, ಕೇಳಿದ ಅನುಭವಗಳನ್ನೇ ಆಧರಿಸಿ ಬರೆಯವವನಾದುದರಿಂದ ಆ ಬರವಣಿಗೆ ಪ್ರಜ್ಞಾಪೂರ್ವಕ, ಅಪ್ರಜ್ಞಾಪೂರ್ವಕ, ಪ್ರತಿಭಾಶಿಶು ಎಂದು ನನಗೆ ಅನಿಸಿಲ್ಲ. ಚಾಮರಾಜನಗರ ಜಿಲ್ಲೆಯ(ಆಗ ಮೈಸೂರು ಜಿಲ್ಲೆ) ಕೊಳ್ಳೇಗಾಲ ತಾಲ್ಲೋಕಿನ ಹನೂರು ಗ್ರಾಮದಿಂದ ಬೆಂಗಳೂರಿಗೆ ಬಂದ ನಾನು ವಿಜಯಾ ಕಾಲೇಜಿನಲ್ಲಿ ಒಂದಿಷ್ಟು ವಿದ್ಯಾಭ್ಯಾಸಕ್ಕಾಗಿ ಸೇರಿಕೊಂಡೆ. ಆಗ ಬಹುತೇಕ ಕಾಲೇಜುಗಳಲ್ಲಿ ಕಲಾವಿಭಾಗಗಳೇ ಇರಲಿಲ್ಲ. ಎಲ್ಲರೂ ವಿಜ್ಞಾನ ಓದಿಯೇ ಬುದ್ಧಿವಂತರಾಗಬೇಕಿತ್ತು. ಆದರೆ ವಿಜ್ಞಾನವೆಂಬುದು ನನ್ನ ತಲೆಗೆ ಅಂಟುವ ವಿಷಯವೇ ಆಗಲಿಲ್ಲ. ಹೇಗೂ ಫೇಲಾಗಿಬಿಡುತ್ತೇನೆ, ಸಂತೋಷದಿಂದ ಊರಿಗೆ ಹೋಗಿಬಿಡುವುದು ಎಂದುಕೊಂಡಿದ್ದ ನನಗೆ ಆ ಒಂದು ವರ್ಷದ ಪಿ.ಯು.ಸಿ ಪಾಸಾಗಿಯೇಬಿಟ್ಟಿತು. ಮತ್ತೆ ಅದೇ ಕಾಲೇಜಿನಲ್ಲಿ ಬಿ.ಎಸ್ಸಿ ಓದುವ ಸಿಸಿಫಸನ ಸಾಹಸ ಆರಂಭವಾಯಿತು. ಆಗ ಕನ್ನಡ ತರಗತಿಗೆ ಬಂದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ತರಗತಿಯಲ್ಲಿದ್ದ ನಮ್ಮನ್ನೆಲ್ಲ ಉದ್ದೇಶಿಸಿ 'ಎಲ್ಲಿ, ಎಲ್ಲರೂ ನಾಲ್ಕುಸಾಲು ಪದ್ಯ, ಇಲ್ಲವೇ ನಿಮ್ಮ ಊರು ಕೇರಿಯ ಅನುಭವ ಅಥವಾ ಒಂದು ಗಾದೆ ಮಾತಿನ ವಿಚಾರ ಬರೆಯಿರಿ' ಎಂದು ಕೇಳಿದರು. ನನಗೆ ಬರೆಯುವುದೆಂದರೇನು ಎಂಬುದೇ ಗೊತ್ತಿರಲಿಲ್ಲ. ಜೀವಿಯವರು ಊರುಕೇರಿಯ ಅನುಭವ ಎಂದಿದ್ದರಲ್ಲ, ಆಗ ತಲೆಗೆ ಬಂದದ್ದು ನಾನು ಬೆಂಗಳೂರಿಗೆ ಬಂದು ಕಳೆದುಕೊಂಡಿದ್ದ ಮಲೆಯ ಮಹದೇಶ್ವರನ ಅರಣ್ಯಸಾಲು. ಆ ಏಳು ಮಲೆಯ ಸಾಲೇ ಶಾಲೆಯಾಗಿದ್ದ ನನಗೆ ಅಲ್ಲಿ ಸುರಿಯುತ್ತಿದ್ದ ದಿನಗಟ್ಟಲೆಯ ಮಳೆ ನೆನಪಿಗೆ ಬಂತು...

1960ರ ಕಾಲಕ್ಕೆ ನಮ್ಮೂರ ಕಪಿಲೆ ಬಾವಿಗಳಲ್ಲಿ ಸಮೃದ್ಧ ನೀರಿದ್ದು ರೈತರು ರಾಗಿ, ಭತ್ತಕ್ಕಿಂತ ಹೆಚ್ಚಾಗಿ ಕಬ್ಬು ಬೆಳೆಯುತ್ತಿದ್ದರು. ಬೆಳೆದ ಕಬ್ಬನ್ನು ಈಗಿನಂತೆ ಸಕ್ಕರೆ ಕಾರ್ಖಾನೆಗೆ ಸಾಗಿಸುವ ಬದಲು ತಂತಮ್ಮ ತೋಟದಲ್ಲೇ ಆಲೆಮನೆ ಕಟ್ಟಿ, ಗಾಣ ಆಡಿಸಿ ಬೆಲ್ಲ ತಯಾರಿಸುತ್ತಿದ್ದರು. ಮಳೆ ನಿಂತ ನವೆಂಬರ್, ಡಿಸೆಂಬರ್ ತಿಂಗಳ ದಿನಗಳಲ್ಲೆಲ್ಲ ಊರ ಸುತ್ತಿನ ಆಲೆಮನೆಗಳಿಂದ ಕಬ್ಬಿನ ಹಾಲು ಕಾಯಿಸಿ ಬೆಲ್ಲ ತಯಾರಿಸುವ ಸಿಹಿ ಸಿಹಿಯ ವಾಸನೆ ನಮ್ಮ ಉಸಿರಾಟದೊಂದಿಗಿರುತ್ತಿತ್ತು. ಸಣ್ಣಸಣ್ಣದಾದ ಐವತ್ತು ಅಚ್ಚುಗಳಿಂದ ಕೂಡಿದ ಒಂದು ಬೆಲ್ಲದ ಪಿಂಡಿಯ ಬೆಲೆ ಐದು ರೂಪಾಯಿ. ಒಮ್ಮೊಮ್ಮೆ ಬೆಲ್ಲದ ಇಳುವರಿ ಹೆಚ್ಚಾಗಿ, ತಕ್ಕಮಟ್ಟಿಗೆ ಶ್ರೀಮಂತರಾದವರು ಮನೆಯಲ್ಲೇ ಬೆಲ್ಲದ ಪಿಂಡಿ ಸ್ಟಾಕು ಮಾಡಿ ಕೊಂಚ ಕಾಲ ಕಳೆದು ವಿಲೇವಾರಿ ಮಾಡುತ್ತಿದ್ದರು. ಇದರೊಂದಿಗೆ ಊರಬೀದಿಗಳಲ್ಲಿ ನಿತ್ಯವೂ ನನಗೆ ಕೇಳಿಸುತ್ತಿದ್ದುದು ಮಾದೇಶ್ವರನ ಕಂಸಾಳೆ ಗುಡ್ಡರ 'ಅಂಗದ ಮ್ಯಾಲಿನ ಲಿಂಗದ ರೂಪೇ, ಮಂಗಳ ಮಹಿಮಾ ಮಾದೇವಾ, ಮೂಡಲ ಗಿರಿಯಲಿ ನೆಲೆಸಿಹ ಮಾದಪ್ಪ, ಮತಿಗಳ ಕರುಣಿಸೊ ಮಾದೇವಾ...' ಈ ಪದ. ಈ ಪ್ರಾರ್ಥನೆ ಮಾದಯ್ಯನನ್ನು ಕುರಿತಾಗಿ ಯಾವುದೇ ಕಥನ ಭಾಗಗಳನ್ನು ಹಾಡಲಿ ಅದರ ಆದಿಗೋ, ತುದಿಗೋ ಇದ್ದೇ ಇರುತ್ತಿತ್ತು.

ಚಾಮರಾಜನಗರ, ಮೈಸೂರು, ಮಂಡ್ಯ ಗ್ರಾಮ ಸುತ್ತಿನಲ್ಲೆಲ್ಲ ಅಸಂಖ್ಯಾತ ಕಂಸಾಳೆ ಗುಡ್ಡರು, ನೀಲಗಾರರು, ಮಲೆಯ ಮಾದಯ್ಯನ ಬೆಟ್ಟದ ಸಾಲೂರು ಮಠ, ಮಳವಳ್ಳಿ ಭಾಗದ ಬೊಪ್ಪೇಗೌಡನಪುರದ ಮಠದಲ್ಲಿ ದೀಕ್ಷೆ ತೆಗೆದುಕೊಂಡು, ಈ ಸಂತರ ಕಥನ ಭಾಗಗಳನ್ನು ಹಾಡಿಕೊಂಡು ಕೋರಣ್ಯವೆತ್ತುತ್ತಿದ್ದರು. ಎತ್ತಿದ ಕೋರಣ್ಯವನ್ನು ಇನ್ನೊಬ್ಬರಿಗೆ ಸ್ವಲ್ಪವಾದರೂ